ಕರ್ನಾಟಕ ಸರ್ಕಾರ, ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ
ಐವಾನ್-ಎ-ಶಾಹಿ ಬಡಾವಣೆ, ಕಲಬುರಗಿ

ಕ.ಸಂ: ಸಿ2(1)ಆಡಳಿತ:ವಿ.ಪ(ವೃ.ಶಿ): ಬಡ್ತಿ:33:2024-25 ದಿನಾಂಕ: 29/04/2025

**ಜ್ಞಾಪನ**

ವಿಷಯ: ಶಾಲಾ ಶಿಕ್ಷಣ ಇಲಾಖೆಯ, ಕಲಬುರಗಿ ಆಯುಕ್ತಾಲಯದ ವ್ಯಾಪ್ತಿಯ, ಸರ್ಕಾರಿ ಪ್ರೌಢ ಶಾಲಾ ವೃತ್ತಿ ಶಿಕ್ಷಣ ಗ್ರೇಡ್-1 ಶಿಕ್ಷಕರಿಗೆ, ಗ್ರೂಪ್-'ಬಿ' ವೃಂದದ ವಿಷಯ ಪರಿವೀಕ್ಷಕರು(ವೃತ್ತಿ ಶಿಕ್ಷಣ) ಹುದ್ದೆಗೆ ಸ್ಥಾನಪನ್ನ ಬಡ್ತಿ ನೀಡಿ, ಸ್ಥಳ ನಿಯುಕ್ತಿಗೊಳಿಸುವ ಕುರಿತು.

ಉಲ್ಲೇಖ: 1) ಗ್ರೂಪ್-'ಬಿ' ವಿಷಯ ಪರಿವೀಕ್ಷಕರು(ವೃತ್ತಿ ಶಿಕ್ಷಣ) ವೃಂದದ ಹುದ್ದೆಗಳಿಗೆ ಸ್ಥಾನಪನ್ನ ಮುಂಬಡ್ತಿ ನೀಡುವ ಹಿನ್ನೆಲೆಯಲ್ಲಿ ನಡೆದ ಇಲಾಖಾ ಮುಂಬಡ್ತಿ ಸಭೆ ನಡಾವಳಿ ದಿನಾಂಕ: 17/04/2025

2) ಈ ಕಛೇರಿ ಪತ್ರ ಸಂಖ್ಯೆ ದಿನಾಂಕ: 17/04/2025 ಮತ್ತು 21/04/2025

3) ದಿನಾಂಕ: 23/04/2025ರಂದು ನಡೆದ ಕೌನ್ಸಲಿಂಗನಲ್ಲಿ ಸ್ಥಳ ಆಯ್ಕೆ ಮಾಡಿಕೊಂಡಂತೆ.

*****

ಉಲ್ಲೇಖ(1)ರ ಇಲಾಖಾ ಮುಂಬಡ್ತಿ ಸಮಿತಿ ಸಭಾ ನಡುವಳಿಯಂತೆ ದಿನಾಂಕ: 01.01.2025 ರಲ್ಲಿದಂತೆ ಕಲಬುರಗಿ ವಿಭಾಗದ ಶಾಲಾ ಶಿಕ್ಷಣ ಇಲಾಖೆಯಲ್ಲಿ ಮುಂಬಡ್ತಿ ಕೋಟಾದಡಿ ಖಾಲಿ ಇರುವ ಗ್ರೂಪ್-'ಬಿ' ವಿಷಯ ಪರಿವೀಕ್ಷಕರು(ವೃತ್ತಿ ಶಿಕ್ಷಣ) ವೃಂದದ ಹುದ್ದೆಗಳನ್ನು ಗುರುತಿಸಿ ಸ್ಥಳೀಯ ವೃಂದದ 05 ಹಾಗೂ ಉಳಿದ ಮೂಲ ವೃಂದದ 01 ಜನ ಒಟ್ಟು 06 ಹುದ್ದೆಗಳಿಗೆ, ವಿಭಾಗದಲ್ಲಿ ಕೆಲಸ ಮಾಡುತ್ತಿರುವ ಅರ್ಹ ಸರ್ಕಾರಿ ಪ್ರೌಢ ಶಾಲಾ ವೃತ್ತಿ ಶಿಕ್ಷಣ ಗ್ರೇಡ್-1 ಶಿಕ್ಷಕರಿಗೆ ಜೇಷ್ಠತೆ ಹಾಗೂ ಪ್ರಚಲಿತ ಮೀಸಲಾತಿ ನಿಯಮಗಳಡಿಯಲ್ಲಿ ಗ್ರೂಪ್-'ಬಿ' ವಿಷಯ ಪರಿವೀಕ್ಷಕರು(ವೃತ್ತಿ ಶಿಕ್ಷಣ) ವೃಂದದ ಹುದ್ದೆಗಳಿಗೆ ವೇತನ ಶ್ರೇಣಿ ರೂ. 69250-134200 ರಲ್ಲಿ ಕರ್ನಾಟಕ ರಾಜ್ಯ ನಾಗರೀಕ ಸೇವಾ ನಿಯಮಗಳು 1958ರ ನಿಯಮ 42(ಬಿ) ಅನ್ವಯ ಸ್ಥಾನಪನ್ನ ಬಡ್ತಿ ನೀಡಿ ಆದೇಶಿಸಿದೆ.

ಉಲ್ಲೇಖ (2)ರ ಈ ಕಛೇರಿ ಪತ್ರದನ್ವಯ ಗ್ರೂಪ್-'ಬಿ' ವೃಂದದ ವಿಷಯ ಪರಿವೀಕ್ಷಕರು(ವೃತ್ತಿ ಶಿಕ್ಷಣ) ಹುದ್ದೆಗೆ ಮುಂಬಡ್ತಿ ಹೊಂದಿದ ಈ ಕೆಳಕಂಡ ಅರ್ಹ ನೌಕರರಿಗೆ ಸ್ಥಳ ನಿಯುಕ್ತಿಗೊಳಿಸಲು ದಿನಾಂಕ: 23/04/2025ರಂದು ಸ್ಥಳ ಆಯ್ಕೆಗಾಗಿ ಕೌನ್ಸಿಲಿಂಗ ನಿಗದಿಪಡಿಸಲಾಗಿದೆ.

ಮುಂದುವರೆದು ಗ್ರೂಪ್-'ಬಿ' ವೃಂದದ ವಿಷಯ ಪರಿವೀಕ್ಷಕರು(ವೃತ್ತಿ ಶಿಕ್ಷಣ) ಹುದ್ದೆಗೆ ಮುಂಬಡ್ತಿ ಹೊಂದಿದ ವೃತ್ತಿ ಶಿಕ್ಷಕರಿಗೆ ದಿನಾಂಕ: 23/04/2025 ರಂದು ಸ್ಥಳ ಆಯ್ಕೆಗಾಗಿ ನಡೆಸಲಾದ ಕೌನ್ಸಿಲಿಂಗನಲ್ಲಿ ಸ್ವ-ಇಚ್ಛೆಯಿಂದ ಆಯ್ಕೆ ಮಾಡಿಕೊಂಡಿರುವ ಸ್ಥಳೀಯ ವೃಂದದ 5 ಹಾಗೂ ಉಳಿದ ಮೂಲ ವೃಂದದ 01 ಗ್ರೂಪ್-'ಬಿ' ವೃಂದದ ವಿಷಯ ಪರಿವೀಕ್ಷಕರು(ವೃತ್ತಿ ಶಿಕ್ಷಣ) ಹುದ್ದೆಗಳಿಗೆ ಅನುಬಂಧದಲ್ಲಿರುವಂತೆ ಕೆಳಕಂಡ ಷರತ್ತುಗಳಿಗೊಳಪಟ್ಟು ಸ್ಥಳ ನಿಯುಕ್ತಿಗೊಳಿಸಿ ಆದೇಶಿಸಿದೆ.

ಷರತ್ತುಗಳು:

1. ಪದವಿ ಪ್ರಮಾಣ ಪತ್ರಗಳ ನೈಜತೆ ಪರಿಶೀಲನಾ ಷರತ್ತಿಗೊಳಪಟ್ಟು ಮುಂಬಡ್ತಿ ಆದೇಶ ಜಾರಿ ಮಾಡಲಾಗಿದ್ದು, ಸದರಿ ದಾಖಲೆಗಳು ಖೊಟ್ಟಿ ಎಂದು ಕಂಡು ಬಂದಲ್ಲಿ ಅವರಿಗೆ ಸಂಬಂಧಿಸಿದಂತೆ ಮುಂಬಡ್ತಿ ಆದೇಶ ರದ್ದುಪಡಿಸಲಾಗಿದೆ ಎಂದೇ ಭಾವಿಸುವುದು.

2. ಇಲಾಖಾ ಪರೀಕ್ಷೆಗಳಾದ ಅಕೌಂಟ್ಸ್ ಹೈಯರ್, ಜನರಲ್ ಲಾ ಭಾಗ-1, ಕನ್ನಡ ಭಾಷಾ ಪರೀಕ್ಷೆ ಪಾಸಾದ/ವಿನಾಯಿತಿ ಪಡೆದ ಬಗ್ಗೆ ಹಾಗೂ ಸೇವಾ ವಿವರಗಳನ್ನು ಪರಿಶೀಲಿಸಿ ಖಾತ್ರಿಪಡಿಸಿಕೊಂಡ ನಂತರವೇ ಚಾಲನಾ ಆದೇಶ ನೀಡುವುದು.
3. ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡ ಶಿಕ್ಷಕರ ಜೇಷ್ಠತೆಯನ್ನು, ಸೇವಾ ಸಕ್ರಮಗೊಂಡ ದಿನಾಂಕದಿಂದ ಪರಿಗಣಿಸಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಂಡು ಮುಂದಿನ ಕ್ರಮ ವಹಿಸುವುದು.
4. ಸದರಿಯವರು ಸ್ಥಾನಪನ್ನ ಬಡ್ತಿ ಹೊಂದಿದ ಹುದ್ದೆಯ ಮೇಲೆ ಕರ್ತವ್ಯಕ್ಕೆ ಹಾಜರಾದ ದಿನಾಂಕದಿಂದ ವೇತನ ಪಡೆಯಲು ಮಹಾಲೇಖಾಪಾಲರಿಂದ ವೇತನ ದೃಢೀಕರಣವನ್ನು (ಪೇ ಸ್ಲಿಪ್) ಪಡೆಯಬೇಕಾದ್ದರಿಂದ, ಆದೇಶ ಪ್ರತಿ, ಕರ್ತವ್ಯಕ್ಕೆ ಹಾಜರಾದ ಬಗ್ಗೆ ಸಿ.ಟಿ.ಸಿ, ಮತ್ತು ಮೂಲ ಸೇವಾ ಪುಸ್ತಕವನ್ನು ಸಂಬಂಧಪಟ್ಟ ಜಿಲ್ಲೆಯ ಉಪನಿರ್ದೇಶಕರು(ಆಡಳಿತ)/ಪ್ರಾಚಾರ್ಯರು ಡಯಟ, ರವರ ಮೂಲಕ ಬಡ್ತಿ ಹೊಂದಿದ ಮತ್ತು ಬಡ್ತಿ ಹೊಂದಿ ವಿಷಯ ಪರಿವೀಕ್ಷಕರು(ವೃತ್ತಿ ಶಿಕ್ಷಣ) ಹುದ್ದೆಯಲ್ಲಿ ಹಾಜರಾದ ವಿವರಗಳನ್ನು ಮೂಲ ಸೇವಾ ಪುಸ್ತಕದಲ್ಲಿ ದಾಖಲಿಸಿ ಉಪ ನಿರ್ದೇಶಕರು(ಆಡಳಿತ)ರವರ ದೃಢೀಕರಣದೊಂದಿಗೆ, ಮಹಾಲೇಖಾಪಾಲರಿಗೆ ಸಲ್ಲಿಸುವುದು.
5. ಮುಂಬಡ್ತಿ ನೀಡಿ ಸ್ಥಳ ನಿಯುಕ್ತಿಗೊಳಿಸಿದ ಸ್ಥಳಗಳಲ್ಲಿ 15 ದಿನಗಳ ಒಳಗಾಗಿ ಹಾಜರಾಗತಕ್ಕದ್ದು.
6. ಕೌನ್ಸಿಲಿಂಗನಲ್ಲಿ ಸ್ವ-ಇಚ್ಛೆಯಿಂದ ಆಯ್ಕೆ ಮಾಡಿಕೊಂಡ ಹುದ್ದೆ ಮತ್ತು ಸ್ಥಳದಲ್ಲಿ ಸ್ಥಳ ನಿಯುಕ್ತಿಗೊಳಿಸಿರುವುದರಿಂದ ಸೇರಿಕೆ ಕಾಲ, ಮತ್ತು ವರ್ಗಾವಣೆ ಭತ್ಯೆಗೆ ಅರ್ಹರಿರುವುದಿಲ್ಲ.
7. ಇಲಾಖೆಗೆ ತಪ್ಪು ಮಾಹಿತಿ ಅಥವಾ ಖೊಟ್ಟಿ ದಾಖಲೆಗಳನ್ನು ನೀಡಿ ಮುಂಬಡ್ತಿಯನ್ನು ಹೊಂದಿದ್ದಲ್ಲಿ, ಯಾವುದೇ ಮುನ್ಸೂಚನೆ ಇಲ್ಲದೇ ಬಡ್ತಿಯನ್ನು ಹಿಂಪಡೆಯುವ ಸಂಪೂರ್ಣ ಅಧಿಕಾರ ಇಲಾಖೆ ಕಾಯ್ದಿರಿಸಿಕೊಂಡಿದೆ.
8. ಈ ಆದೇಶದಲ್ಲಿ ಸ್ಥಳ ನಿಯುಕ್ತಿಗೊಳಸಿದ ನೌಕರರು ಆಯ್ಕೆ ಮಾಡಿಕೊಂಡ ಹುದ್ದೆಗೆ ಕಡ್ಡಾಯವಾಗಿ ಹಾಜರಾಗತಕ್ಕದ್ದು, ಇಲ್ಲವಾದಲ್ಲಿ ಶಿಸ್ತು ಕ್ರಮಕ್ಕೆ ಒಳಪಡಿಸಲಾಗುವುದು.

ಈ ಮೇಲಿನ ಎಲ್ಲಾ ಷರತ್ತುಗಳನ್ನು ಪೂರೈಸಿದ ಬಗ್ಗೆ ಖಚಿತಪಡಿಸಿಕೊಂಡು, ಸಂಬಂಧಿಸಿದ ಜಿಲ್ಲಾ ಉಪ ನಿರ್ದೇಶಕರು(ಆಡಳಿತ)ರವರು ಚಾಲಾನಾ ಆದೇಶವನ್ನು ಜಾರಿಗೊಳಿಸತಕ್ಕದ್ದು.

29.04.25

(ಡಾ. ಆಕಾಶ ಎಸ್) ಭಾ.ಆ.ಸೇ
ಅಪರ ಆಯುಕ್ತರು
ಶಾಲಾ ಶಿಕ್ಷಣ ಇಲಾಖೆ ಕಲಬುರಗಿ

ಪ್ರತಿಯನ್ನು:

i. ಮಹಾಲೇಖಾಪಾಲರು (ಲೆ & ಹ), ಕರ್ನಾಟಕ, ಪಾರ್ಕ ಹೌಸ್ ರೋಡ, ಬೆಂಗಳೂರು-01
ii. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ, ಬೆಂಗಳೂರು-01
iii. ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು/ಧಾರವಾಡ.
iv. ಕಲಬುರಗಿ ವಿಭಾಗದ ಎಲ್ಲಾ ಜಿಲ್ಲಾ ಪಂಚಾಯತಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ.
v. ಕಲಬುರಗಿ ವಿಭಾಗದ ಶಾಲಾ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು (ಆಡಳಿತ)ರವರಿಗೆ, ಕಳುಹಿಸುತ್ತ, ನಿಯಾಮಾನುಸಾರ ಪರಿಶೀಲಿಸಿ ಚಾಲನಾ ಆದೇಶಗಳನ್ನು ತಕ್ಷಣ ಜಾರಿ ಮಾಡಿ, ಕ್ರೋಢಿಕೃತ ವರದಿಯನ್ನು ಸಲ್ಲಿಸಲು ತಿಳಿಸಿದೆ.
vi. ಸಂಬಂಧಿಸಿದ ತಾಲೂಕು ಪಂಚಾಯತಗಳ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ.

vii. ನಿರ್ದೇಶಕರು, ಸಿಸ್ಲೆಪ್ ಧಾರವಾಡ.
viii. ವಿಭಾಗದ ಎಲ್ಲಾ ತಾಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ.
ix. ಸಂಬಂಧಿಸಿದ ಶಾಲೆ/ಕಛೇರಿ ಮುಖ್ಯಸ್ಥರಿಗೆ.
x. ಸಂಬಂಧಿಸಿದ ಅಧಿಕಾರಿ/ನೌಕರರಿಗೆ.
xi. ಕಛೇರಿಯ ಆಯುಕ್ತರು/ ನಿರ್ದೇಶಕರು / ಸಹ ನಿರ್ದೇಶಕರು(ಆಡಳಿತ)/ (ಪರೀಕ್ಷೆಗಳು) ರವರ ಆಪ್ತ ಶಾಖೆಗೆ.
xii. ಕಛೇರಿಯ ಇ-ಗವರ್ನೆನ್ಸ್ ಶಾಖೆಗೆ ನೀಡಿ, ಇಲಾಖೆಯ ವೆಬ್-ಸೈಟ್‌ನಲ್ಲಿ ಅಳವಡಿಸಲು ತಿಳಿಸಿದೆ.
xiii. ಕಛೇರಿಯ ಪ್ರತಿ

**ಕರ್ನಾಟಕ ಸರ್ಕಾರ, ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ಕಲಬುರಗಿ**

ಕ.ಸಂ: ಸಿ2(1)ಆಡಳಿತ:ವಿ.ಪ(ವೃ.ಶಿ):ಬಡ್ತಿ:33:2024-25 ದಿನಾಂಕ: 29/04/2025

## ಅನುಬಂಧ

**ದಿನಾಂಕ 01.01.2025 ರಲ್ಲಿದ್ದಂತೆ ಮುಂಬಡ್ತಿ ಕೋಟಾದಡಿ ಸ್ಥಳಿಯ ವೃಂದದಲ್ಲಿ ಖಾಲಿ ಇರುವ ಗ್ರೂಪ್-'ಬಿ' ವಿಷಯ ಪರಿವೀಕ್ಷಕರು(ವೃತ್ತಿ ಶಿಕ್ಷಣ) ವೃಂದದ ಹುದ್ದೆಗೆ ಮುಂಬಡ್ತಿ ಹೊಂದಿದ ಸರ್ಕಾರಿ ಪ್ರೌಢ ಶಾಲಾ ವೃತ್ತಿ ಶಿಕ್ಷಣ ಗ್ರೇಡ್-1 ಶಿಕ್ಷಕರ ಸ್ಥಳ ನಿಯುಕ್ತಿಗೊಳಿಸಿದ ಪಟ್ಟಿ**

## ಸ್ಥಳಿಯ ವೃಂದ

| ಕ್ರ.ಸಂ. | ಮೂ. ವೃಂ. ಜೇ. ಸಂ. | ಶಿಕ್ಷಕರ ಹೆಸರು, ಪದನಾಮ ಮತ್ತು ಶಾಲೆಯ/ಕಛೇರಿಯ ವಿಳಾಸ ಶ್ರೀ/ಶ್ರೀಮತಿ | ಗ್ರೂಪ್-'ಬಿ' ವೃಂದದ ವಿಷಯ ಪರಿವೀಕ್ಷಕರು(ವೃತ್ತಿ ಶಿಕ್ಷಣ) ಹುದ್ದೆಗೆ ಸ್ಥಳ ನಿಯುಕ್ತಿಗೊಳಿಸಿದ ಕಛೇರಿ ವಿಳಾಸ |
|---|---|---|---|
| 1 | 2 | 3 | 4 |
| 1 | 165 | ಎಸ್ ವೀಣಾ, ವೃತ್ತಿ ಶಿಕ್ಷಕರು, ಸರ್ಕಾರಿ ಪ್ರೌಢ ಶಾಲೆ ತಾವರಗೇರಾ, ತಾ: ಕುಷ್ಟಗಿ, ಜಿ: ಕೊಪ್ಪಳ | ಉಪನಿರ್ದೇಶಕರು(ಆಡಳಿತ), ಶಾಲಾ ಶಿಕ್ಷಣ ಇಲಾಖೆ, ಕೊಪ್ಪಳ |
| 2 | 216 | ಕೆ ಎಂ ವೇದಾವತಿ , ವೃತ್ತಿ ಶಿಕ್ಷಕರು, ಸರ್ಕಾರಿ ಪ್ರೌಢ ಶಾಲೆ, ಬಾಣಾಪುರ, ಜಿ: ಬಳ್ಳಾರಿ | ಉಪನಿರ್ದೇಶಕರು(ಆಡಳಿತ) ಶಾಲಾ ಶಿಕ್ಷಣ ಇಲಾಖೆ, ಬಳ್ಳಾರಿ |
| 3 | 216(ಎ | ಕೆ ಹೆಚ್ ಎಂ ವಿಶ್ವನಾಥ, ವೃತ್ತಿ ಶಿಕ್ಷಕರು, ಸರ್ಕಾರಿ ಪ್ರೌಢ ಶಾಲೆ ಸೂಲದಹಳ್ಳಿ, ತಾ: ಕೂಡ್ಲಿಗಿ, ಜಿ: ವಿಜಯನಗರ | ಉಪನಿರ್ದೇಶಕರು(ಆಡಳಿತ), ಶಾಲಾ ಶಿಕ್ಷಣ ಇಲಾಖೆ, ವಿಜಯನಗರ |
| 4 | 222 | ಸಲೀಮ್ ಪಾಶಾ, ವೃತ್ತಿ ಶಿಕ್ಷಕರು, ಕರ್ನಾಟಕ ಪಬ್ಲಿಕ್ ಶಾಲೆ, ಮಟಮಾರಿ, ಜಿ: ರಾಯಚೂರು | ಉಪನಿರ್ದೇಶಕರು(ಆಡಳಿತ), ಶಾಲಾ ಶಿಕ್ಷಣ ಇಲಾಖೆ, ರಾಯಚೂರ |
| 5 | 225 | ಸುಮಂಗಲಾ, ವೃತ್ತಿ ಶಿಕ್ಷಕರು, ಸರ್ಕಾರಿ ಪ್ರೌಢ ಶಾಲೆ ಯಲಗಟ್ಟಾ, ತಾ: ಲಿಂಗಸೂಗೂರು, ಜಿ: ರಾಯಚೂರ | ಉಪನಿರ್ದೇಶಕರು(ಆಡಳಿತ), ಶಾಲಾ ಶಿಕ್ಷಣ ಇಲಾಖೆ, ಕಲಬುರಗಿ |

## ಉಳಿದ ಮೂಲ ವೃಂದ

| ಕ್ರ.ಸಂ. | ಮೂ. ವೃಂ. ಜೇ. ಸಂ. | ಶಿಕ್ಷಕರ ಹೆಸರು, ಪದನಾಮ ಮತ್ತು ಶಾಲೆಯ/ಕಛೇರಿಯ ವಿಳಾಸ ಶ್ರೀ/ಶ್ರೀಮತಿ | ಗ್ರೂಪ್-'ಬಿ' ವಿಷಯ ಪರಿವೀಕ್ಷಕರು (ವೃತ್ತಿ ಶಿಕ್ಷಣ) ವೃಂದದ ಹುದ್ದೆಗೆ ಸ್ಥಳ ನಿಯುಕ್ತಿಗೊಳಿಸಿದ ಕಛೇರಿ ವಿಳಾಸ |
|---|---|---|---|
| 1 | 2 | 3 | 4 |
| 1 | 220 | ಸುಜಾತ ಆರ್, ವೃತ್ತಿ ಶಿಕ್ಷಕರು, ಸರ್ಕಾರಿ ಆದರ್ಶ ವಿದ್ಯಾಲಯ, ಎ.ಡಿ ಗುಡ್ಡ, ತಾ: ಕೂಡ್ಲಿಗಿ, ಜಿ: ವಿಜಯನಗರ | ಉಪನಿರ್ದೇಶಕರು (ಆಡಳಿತ), ಶಾಲಾ ಶಿಕ್ಷಣ ಇಲಾಖೆ, ಯಾದಗಿರಿ |

29·04·25

(ಡಾ. ಆಕಾಶ ಎಸ್) ಭಾ.ಆ.ಸೇ
ಅಪರ ಆಯುಕ್ತರು
ಶಾಲಾ ಶಿಕ್ಷಣ ಇಲಾಖೆ ಕಲಬುರಗಿ